ಅಂಗಳದ ನೆಲಹಾಸು ಕಿತ್ತು
ಮಣ್ಣು ಹಸನು ಮಾಡಿ
ಮುಷ್ಟಿ ಬೀಜ ಬಿತ್ತಿದೆವು
ನೀರು ಹನಿಸುವುದು, ಕಳೆಕೀಳುವುದು
ಗೊಬ್ಬರ ಹಾಕುವುದು ಎಲ್ಲ ದೇಖರೇಖಿ
ಅವಳೇ ನೋಡಿಕೊಂಡಳು



ವಾಗೀಶ ಹೆಗಡೆ

ಬರೀ ಜೋಗುಳ ಹಾಡುವ ಕೆಲಸವನ್ನಷ್ಟೆ
ಗಾಳಿಗೆ ಬಿಟ್ಟಳು

ಅಜ್ಜ, ಅಜ್ಜಿ, ಅಪ್ಪ, ಅವ್ವ ಎಲ್ಲ
ಅಂಗಳಕ್ಕೆ ಬಂದು
ಊಳಿ, ಬಿತ್ತಿ, ನೆಟ್ಟು, ತೂರಿ ಸರಭರ
ಓಡಿಯಾಡಿದಂತಾಯ್ತು

ಕದಿರು ಹೂವಾಡಲಾರಂಭಿಸಿತು
ಅಂತರ್ಜಾಲದಲ್ಲಷ್ಟೇ ಬರುತ್ತಿದ್ದ
ಚಿಟ್ಟೆ, ದುಂಬಿ, ಮಿಡತೆ, ಜೇನ್ನೊಣಗಳೆಲ್ಲ
ಅಂಗಳಕ್ಕೆ ಬಂದವು
ತೆನೆ ಮೈದುಂಬಿದಂತೆ
ಗುಬ್ಬಿ, ಗಿಳಿ, ಕಾಜಾಣ, ಪಾರಿವಾಳ...
ಅಲ್ಲಿ ಸುರುಟಿಕೊಂಡಂತಿದ್ದ ಅವೆಲ್ಲ
ಇಲ್ಲಿ ಸುಸೂತ್ರ ಮೈಮುರಿದು
ಉಸಿರಾಡಿಕೊಂಡವು

ಈಗ
ಮುಷ್ಟಿ ಭತ್ತಕ್ಕೆ
ಕೊಳಗ ಅಕ್ಕಿ, ಹೊರೆ ಹುಲ್ಲು
ದಾಸ್ತಾನಾಗಿದೆ

'ಅಮ್ಮಾ, ಹೊರೆ ಹುಲ್ಲಿದೆ
ನಾವೂ ದನ ಸಾಕೋಣವೇ...'
ಎನ್ನುತ್ತಿದ್ದಾಳೆ
ಕೊರಳಿಗೊಂದು ಗಂಟೆ
ಈಗಾಗಲೇ ತಂದಿಟ್ಟುಕೊಂಡಿದ್ದಾಳೆ

ಮುಂದಿನ ಬಾರಿ ಭತ್ತಕ್ಕೆ
ಗೊಬ್ಬರವೂ
ಅವಳದ್ದೇ...

● **ರೇಣುಕಾ ರಮಾನಂದ**